**CC No. 659/2014**
**PW.1**

**<u>ಸಾಕ್ಷಿಗೆ ದಿನಾಂಕ 21.11.2023 ರಂದು ಪ್ರಮಾಣ ವಚನ ಭೋದಿಸಲಾಯಿತು</u>**

<u>**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದಃ</u>

ಚಾಸಾ-3 ರವರಿಗೆ ಇಬ್ಬರು ಹೆಂಡತಿಯರು ಎಂದರೆ ಗೊತ್ತಿಲ್ಲ. ಆರೋಪಿ-2 ರವರು ಚಾಸಾ-3 ರವರ ಹೆಂಡತಿ ಎಂದರೆ ಗೊತ್ತಿಲ್ಲ. ಆರೋಪಿತರು ನಮ್ಮ ಸಂಬಂಧಿಕರು ಅಲ್ಲ. ಸುಮಾರು 10 ವರ್ಷಗಳ ಹಿಂದೆ ಗಲಾಟೆಯಾಗಿರುತ್ತದೆ. ಆರೋಪಿತರು ಸೂಲುಕುಂಟೆ ಗ್ರಾಮದವರು ಎಂದರೆ ಗೊತ್ತಿಲ್ಲ. ನಾನು ಸೂಲುಕುಂಟೆಯಲ್ಲಿ ವಾಸವಿಲ್ಲ, ನಮ್ಮ ಊರು ನಾಗಾಪುರ ಎಂದರೆ ಸರಿಯಲ್ಲ. ನಮ್ಮ ಊರಿನಿಂದ ಘಟನಾ ಸ್ಥಳಕ್ಕೆ ಎಷ್ಟು ದೂರ ಇದೆ ಎಂದು ಗೊತ್ತಿಲ್ಲ. ವಿವಾದಿತ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆ. ಅದರ ಸರ್ವೇ ನಂ. 10. ನನಗೂ ಮತ್ತು ಆರೋಪಿತರಿಗೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಓ.ಎಸ್. ನಂ. 425/2007 ರಂತೆ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ಆರೋಪಿ-2 ರವರು ಭಾಗಾಂಶ ಕೋರಿ ಸಲ್ಲಿಸಿದ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಸಮಯದಲ್ಲಿ ಚಾಸಾ-2 ರಿಂದ 4 ರವರು ಇದ್ದರು.

ವಿವಾದಿತ ಘಟನೆ ನಡೆದಿದೆ ಎಂದು ಹೇಳಲಾಗುವ ಸ್ಥಳ ಆರೋಪಿ-3 ರವರಿಗೆ ಸೇರಿದ್ದರಿಂದ ಅವರು ಅವರ ಜಮೀನಿನಲ್ಲಿ ತೆಂಗಿನ ಕಾಯಿಯನ್ನು ಕೀಳಿಸುತ್ತಿದ್ದರು, ನಾವೇ ಹೋಗಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಆರೋಪಿತರೇ ಮೊದಲು ದೂರು ದಾಖಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ದೂರನ್ನು ರಾಜಿ ಮಾಡಿಸಿ ನಂತರ ನಾನೇ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ-1 ರವರು ಚಾಸಾ-2 ರವರ ಬೆನ್ನಿಗೆ ಹೊಡೆದಿರುತ್ತಾರೆ ಮತ್ತು ಚಾಸಾ-3 ರವರಿಗೂ ಹೊಡೆದಿರುತ್ತಾರೆ. ದೂರನ್ನು ದಾಖಲಿಸಲು ನಾನ, ಚಾಸಾ-2 ಮತ್ತು ಚಾಸಾ-3 ರವರು ಹೋಗಿರುತ್ತೇವೆ. ನಿಪಿ-1 ರಲ್ಲಿ ಬರೆದಿರು ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-2 ನ್ನು ಜರುಗಿಸಲು ಪೋಲೀಸಿನವರು ನೋಟೀಸ್‌ನ್ನು ನೀಡಿರುತ್ತಾರೆ. ನೋಟೀಸ್ ನೀಡಿದ ದಿನಾಂಕ ಮತ್ತು ಪಂಚನಾಮೆ ಜರುಗಿಸಿದ ದಿನಾಂಕ ಹೇಳಲಾಗುವುದಿಲ್ಲ.

ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಚೆಕ್ಕುಬಂಧಿ ಹೇಳಲಾಗುವುದಿಲ್ಲ. ಆರೋಪಿ ಪರ ವಕೀಲರು ಯಾವ ದೊಣ್ಣೆಯಿಂದ ಆರೋಪಿತರು

ಹೊಡೆದಿರುತ್ತಾರೆ ಎಂದು ಕೇಳಿದ್ದಕ್ಕೆ ಸಾಕ್ಷಿ ಆರೋಪಿತರು ನೀಲಗಿರಿ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲ.

(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**